Vijay Karnataka Page 4

### ಲೋಕಸಭಾ ಚುನಾವಣೆಯಲ್ಲಿ ಸಹೋದ್ಯೋಗಿಗಳನು ಕಣಕ್ಕಿಳಿಸಲು ಮುಖ್ಯಮಂತ್ರಿ ಚಿಂತನೆ

# ಇಬ್ಬರು ಸಚಿವರು ಅಖಾಡಕ್ಕೆ: ಸಿದ್ದು

■ **ವಿಕ ಸುದ್ದಿಲೋಕ** ಮೈಸೂರು

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರಕಾರದ ಇಬ್ಬರು ಸಚಿವರು ಕಣಕ್ಕಿಳಿಯುವುದು ಬಹುತೇಕ ನಿಶ್ಚಿತ. ಆ ಸಚಿವರು ಯಾರು, ಕೇತ್ರ ಯಾವುದು ಎನ್ನುವುದು ಖಚಿತವಿಲ್ಲ.

ನಾನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಭಾನುವಾರ ಮೈಸೂರಿಗೆ ಆಗಮಿಸಿದಾಗ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂಥದೊಂದು ಸುಳಿವು ನೀಡಿದರು.

''ಮಾರ್ಚ್ ಮೊದಲ ಅಥವಾ ಎರಡನೇ ವಾರ ರಾಜ್ಯ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಗೆ ತಯಾರಿ ನಡೆದಿದೆ. ಕೆಲ ಕ್ಷೇತ್ರದಲ್ಲಿ ಶಾಸಕರನ್ನು, ಒಂದೆರಡು ಕ್ಷೇತ್ರಗಳಿಗೆ ಸಚಿವರ ಹೆಸರನ್ನು ಶಿಫಾರಸು ಮಾಡಿದ್ದೇವೆ. ಯಾವ ಕ್ಷೇತ್ರದಲ್ಲಿ ಸಚಿವರು ಸ್ಪರ್ಧಿಸುತ್ತಾರೆ ಎನ್ನುವುದನ್ನು ಈಗಲೇ ಹೇಳಲಾಗದು,''ಎಂದರು.

ಜನ ಗಣ ಮನ

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಮಾಜಿ ಸಿಎಂ ಡಿ.ವಿ. ಸದಾನಂದಗೌಡ ಬಿಜೆಪಿ ಅಭ್ಯರ್ಥಿಯಾಗುವ ಬಗ್ಗೆ ಕೇಳಿದ ಪ್ರಶ್ನೆಗೆ ,''ಸ್ಪರ್ಧೆ ಮಾಡಲಿ, ಬೇಡ ಎಂದೋರು ಯಾರು? ಯಾರೇ ಸ್ಪರ್ಧೆ ಮಾಡಿದರೂ ನಮ್ಮದೇನೂ ಅಭ್ಯಂತರವಿಲ್ಲ'' ಎಂದು ಪ್ರತಿಕ್ರಿಯಿಸಿದರು.

**ಹಣದ ಕೊರತೆ ಇಲ್ಲ:** ''ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಲು ಅಧಿಕಾರಿಗಳಿಗೆ ಸೂಚಿಸಿದ್ದು,ಅಗತ್ಯ ಅನುದಾನ ನೀಡಲಾಗಿದೆ. ಅವಶ್ಯ ಇರುವ ಕಡೆ ಕೇಳಿದಷ್ಟು ಹಣ ನೀಡಲು ಸರಕಾರ ಸಿದ್ಧವಿದೆ. ಗ್ರಾಮೀಣ ಪ್ರದೇಶದಲ್ಲಿ ದಿನನಿತ್ಯ ಏಳು ಗಂಟೆ ತ್ರೀಫೇಸ್ ವಿದ್ಯುತ್ ಕೊಡಲಾಗುತ್ತಿದೆ. ಮುಂದೆ ಲೋಡ್‌ಶೆಡ್ಡಿಂಗ್ ಮಾಡದ ರೀತಿ ಕ್ರಮಕ್ಕೈಗೊಳ್ಳುತ್ತೇವೆ, ''ಎಂದರು.



ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಪಿಕೆಟಿಬಿ ಸ್ಯಾನಿಟೋರಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ 350 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಸಂಕೀರ್ಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಸಂಸ್ಥೆ ನಿರ್ದೇಶಕ ಡಾ.ಸಿ.ಎನ್,ಮಂಜುನಾಥ್, ಸಚಿವರಾದ ಎಚ್.ಎಸ್.ಮಹಾದೇವ ಪ್ರಸಾದ್, ಎಚ್.ಸಿ. ಮಹದೇವಪ್ಪ ಇತರರು ಹಾಜರಿದ್ದರು.

### ರಾಮದಾಸ್ ಪತ್ರ ಬಂದಿಲ್ಲ: ಸಿಎಂ

''ಪ್ರೇಮಕುಮಾರಿ ಮಾಡಿರುವ ಆರೋಪದ ಬಗ್ಗೆ ತನಿಖೆ ನಡೆಸುವಂತೆ ಮಾಜಿ ಸಚಿವ ಎಸ್.ಎ.ರಾಮದಾಸ್ ಅವರಿಂದ ಯಾವ ಪತ್ರವೂ ಬಂದಿಲ್ಲ''ಎಂದು ಸಿದ್ದರಾಮಯ್ಯ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವೈಯಕ್ತಿಕವಾಗಿ ನನಗೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಆಸಕ್ತಿಯಿಲ್ಲ, ಸಚಿವನಾಗಿರುವುದರಿಂದ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕೆಲಸ ಮಾಡಬೇಕಾಗಿದೆ. ಆದರೆ, ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಹೈಕಮಾಂಡ್ ಹಾಗೂ ಕ್ಷೇತ್ರದ ಜನತೆ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ

**- ಎಚ್.ಆಂಜನೇಯ,** ಸಮಾಜ ಕಲ್ಯಾಣ ಸಚಿವ

(ಚಿತ್ರದುರ್ಗದಲ್ಲಿ ನಡೆದ ಕೃಷಿ ಉತ್ಸವ ಸಮಾರೋಪದಲ್ಲಿ)

---

Kannada Prabha page no.

## ಅವಘಡಕ್ಕೂ ಮುನ್ನ ಬೆಸ್ಕಾಂ ಎಚ್ಚರಗೊಳ್ಳಲಿ

ಬಸವನಗುಡಿಯ ಡಿವಿಜಿ ರಸ್ತೆ ಮತ್ತು ಸುತ್ತಮುತ್ತ ಹಲವು ಬೆಸ್ಕಾಂ ಜಂಕ್ಷನ್‌ಗಳು ಕಿತ್ತು ಬೀಳುವ ಸ್ಥಿತಿಯಲ್ಲಿವೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ವಲಯದ ಎಲ್ಲಾ ಜಂಕ್ಷನ್ ಬಾಕ್ಸ್‌ಗಳಿಗೂ ಕಾಯಕಲ್ಪ ನೀಡಬೇಕಿದೆ. ಆದರೂ ಬೆಸ್ಕಾಂ ಇತ್ತ ಗಮನಿಸುತ್ತಿಲ್ಲ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಲಿ.

ನಗರ ಸಮಸ್ಯೆ

■ ಕೋಟೇಶ್ವರ ಸೂರ್ಯನಾರಾಯಣ್, ಬಸವನಗುಡಿ

---

ವಿಜಯವಾಣಿ 24/02/14

## ವಿದ್ಯುತ್ ಕಡಿತ



ಬೆಸ್ಕಾಂ ಸಿಬ್ಬಂದಿ ಪ್ರತಿ ಶುಕ್ರವಾರ ವಿದ್ಯುತ್ ಕಡಿತ ಮಾಡುತ್ತಾರೆ. ಬೀದಿದೀಪ ದುರಸ್ತಿಗೆ ದೂರು ನೀಡಿದ್ದೇವೆ. ಕಾಮಗಾರಿ ಆರಂಭಿಸಿಲ್ಲ.

। ಸೈಯದ್ ಸಲಾವುದ್ದೀನ್

ಉದ್ದೇಶಪೂರ್ವಕವಾಗಿ ಯಾರೂ ವಿದ್ಯುತ್ ಕಡಿತ ಮಾಡುತ್ತಿಲ್ಲ. ಟ್ರಾನ್ಸ್‌ಫಾರ್ಮರ್ ತೊಂದರೆಯಿಂದ ಸಮಸ್ಯೆ ಇತ್ತು. ಈಗ ಟ್ರಾನ್ಸ್‌ಫಾರ್ಮರ್ ಬದಲಾಯಿಸಲಾಗಿದೆ. ಇನ್ನು ಮುಂದೆ ಈ ರೀತಿಯ ಸಮಸ್ಯೆ ಇರುವುದಿಲ್ಲ ಎಂದು ಬೆಸ್ಕಾಂ ಇಂಜಿನಿಯರ್ ಜಯರಾಂ ಹೇಳಿದರು.

---

ಉದಯವಾಣಿ page 8

## ರೈತರಿಗೆ ರಾತ್ರಿ ವೇಳೆ ಕರೆಂಟು ಕೊಡಬೇಡಿ!

ಅಚ್ಚರಿಯ ಬೇಡಿಕೆ. ಹೌದು. ನಾವು ರೈತರು, ಕೇಳುತ್ತಿರುವುದೇನೆಂದರೆ, ತ್ರೀಫೇಸ್ ವಿದ್ಯುತ್ ರಾತ್ರಿ ವೇಳೆ ಕೊಡಬೇಡಿ. ಸರ್ಕಾರ ನೀರಾವರಿಗಾಗಿ ಈಗ ಹಳ್ಳಿಗಳಿಗೆ ಒದಗಿಸುತ್ತಿರುವುದು ಕೇವಲ 7 ತಾಸು ಕರೆಂಟ್ ಮಾತ್ರ. ಅದರಲ್ಲೂ 4 ತಾಸು ಹಗಲು ಕೊಟ್ಟರೆ, 3 ತಾಸು ಮಧ್ಯರಾತ್ರಿ ಹೊತ್ತಿಗೆ ಕೊಡುತ್ತಿದೆ. ಆದರೆ ರಾತ್ರಿ ವೇಳೆ ಪಂಪ್ ಚಾಲೂ ಮಾಡಲು ಹೋಗುವುದರಿಂದ ವನ್ಯಪ್ರಾಣಿ ಇತ್ಯಾದಿ ಅವಘಡಗಳಿಗೆ ಬಲಿಯಾಗುವ ಭಯ ಕಾಡುತ್ತಿದೆ. ಕೆಲವು ದಿನಗಳ ಹಿಂದೆ ನಮ್ಮ ಪಕ್ಕದ ಗ್ರಾಮದ ಯುವಕ ರಾತ್ರಿ ವೇಳೆ ಪಂಪ್ ಚಾಲೂ ಮಾಡಲು ಹೋದಾಗ ತುಂಡಾದ ವಿದ್ಯುತ್ ತಂತಿ ತುಳಿದು ಮೃತಪಟ್ಟಿದ್ದ. ಅಲ್ಲದೇ, ಹೊಲಕ್ಕೆ ನೀರು ಸರಿಯಾಗಿ ಹೋಗುತ್ತಿದೆಯೇ, ಬೆಳೆ ಸರಿಯಾಗಿ ನೀರು ಉಣ್ಣುತ್ತಿದೆಯೇ ಎಂಬುದೂ ತಿಳಿಯುವುದಿಲ್ಲ, ಹೊತ್ತುಗೊತ್ತಿಲ್ಲದೆ ಕರೆಂಟು ಕೊಡುವ ವ್ಯವಸ್ಥೆ ಮಧ್ಯರಾತ್ರಿಯ ಸಂಕಷ್ಟಗಳಿಂದ ನಾವು ಅನಾರೋಗ್ಯಕ್ಕೂ ಈಡಾಗುತ್ತಿದ್ದೇವೆ. ಇದರಿಂದ ದೈನಂದಿನ ಕೆಲಸಕ್ಕೂ ತೊಂದರೆಯಾಗುತ್ತಿದೆ. ಅಲ್ಲದೆ ಸದ್ಯ 7 ಗಂಟೆ ಕರೆಂಟು ನೀಡುವುದರಿಂದ ನೀರೂ ಸರಿಯಾಗಿ ಹರಿಸಲು ಸಾಧ್ಯವಾಗುತ್ತಿಲ್ಲ, ಅದಕ್ಕಾಗಿ ಕನಿಷ್ಠ 10 ಗಂಟೆ ಕರೆಂಟನ್ನು ಹಗಲಲ್ಲೇ ನೀಡಿ ಎಂಬುದು ನಮ್ಮ ಬೇಡಿಕೆ.

■ ಬಿ.ಪ್ರಭು ಆಡವಿಹಾಳ,
ಹುನಗುಂದ